ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1494
ಸದಸ್ಯರ ಹೆಸರು	ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	17.03.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನಗರೀಕೃತ ಪ್ರದೇಶಗಳಲ್ಲಿರುವ ಆಸ್ತಿಗಳಿಗೆ ಯಾವುದೇ ಅಧಿಕೃತ ಹಕ್ಕು ದಾಖಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿರುವ ಸುಮಾರು 276 ನಗರ ಸ್ಥಳೀಯ ಸಂಸ್ಥೆಗಳಲ್ಲಿ 48 ನಗರ/ಪಟ್ಟಣಗಳಲ್ಲಿ ಸನ್ 1930 ರಿಂದಲೇ ನಗರಮಾಪನದಡಿ ಹಕ್ಕುದಾಖಲೆಗಳನ್ನು ಸಿದ್ಧಪಡಿಸಿ ನಿರ್ವಹಿಸಲಾಗುತ್ತಿದೆ. ಆದರೆ, ತದನಂತರದಲ್ಲಿ ವಿಸ್ತೃತಗೊಂಡ ನಗರೀಕೃತ ಪ್ರದೇಶಗಳಿಗೆ ಹಕ್ಕುದಾಖಲೆಗಳನ್ನು ಸಿದ್ಧಪಡಿಸಲಾಗಿರುವುದಿಲ್ಲ.
ಆ)	ನಗರೀಕೃತ ಆಸ್ತಿಗಳಿಗೆ ಹಕ್ಕು ದಾಖಲೆ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	2010ರಿಂದ ಮೈಸೂರು, ಶಿವಮೊಗ್ಗ ಮತ್ತು ಮಂಗಳೂರು ನಗರಗಳಲ್ಲಿ ನಗರಾಸ್ತಿ ಮಾಲೀಕತ್ವದ ಹಕ್ಕು ದಾಖಲೆಗಳ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಇದರ ಸಾಧಕ ಬಾಧಕಗಳನ್ನು ಆಧರಿಸಿ, ರಾಜ್ಯಾದ್ಯಂತ ಹಂತ ಹಂತವಾಗಿ ವಿಸ್ತರಿಸಲು ಉದ್ದೇಶಿಸಲಾಗಿದೆ.
ಇ)	ನಗರೀಕೃತ ಆಸ್ತಿಗಳಿಗೆ ಹಕ್ಕು ದಾಖಲೆ ನೀಡಲು ಭೂಮಾಪನ (ಸರ್ವೆ) ಇಲಾಖೆಯಲ್ಲಿ ಪ್ರತ್ಯೇಕ ಶಾಶ್ವತ ವ್ಯವಸ್ಥೆ ಸೃಜಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ತರಲಾಗುವುದು? (ವಿವರ ನೀಡುವುದು)	ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿಯು ಗ್ರಾಮೀಣ ಪ್ರದೇಶದ ಭೂಮಾಪನ ಕಾರ್ಯ ಹಾಗೂ ಜಾರಿಯಲ್ಲಿರುವ ನಗರಮಾಪನ ಕಛೇರಿಗಳಲ್ಲಿ ನಗರಮಾಪನ ಕಾರ್ಯವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ನಗರಮಾಪನವನ್ನು ರಾಜ್ಯಾದ್ಯಂತ ವಿಸ್ತರಿಸಿದಲ್ಲಿ ಈ ಯೋಜನೆಯನ್ನು ಪ್ರತ್ಯೇಕ ಮೇಲುಸ್ತುವಾರಿಯಲ್ಲಿ ನಿರ್ವಹಿಸುವ ಬಗ್ಗೆ ಕ್ರಮವಹಿಸಲಾಗುವುದು.

ಸಂಖ್ಯೆ: ಕಂಇ 49 ಎಸ್ಎಸ್‌ಸಿ 2021

(ಆರ್. ಅಶೋಕ)
ಕಂದಾಯ ಸಚಿವರು